**ಸಿಸಿ ನಂ. 2589/2023**

**ಸಿ.ಡಬ್ಲೂ-6 ಪಿ.ಡ್ಲೂ:6**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.**

| | | |
|---|---|---|
| ಸಾಕ್ಷಿದಾರನ ಹೆಸರು | : | ಮಡಿವಾಳಪ್ಪ ಕುಡಿ |
| ತಂದೆ ಹೆಸರು | : | ಸಾಯಬಣ್ಣ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಗುತ್ತಿಗೆದಾರ |
| ವಾಸ ಸ್ಥಳ | : | ಗೋರವಗುಂಡಗಿ |

ದಿನಾಂಕ 12-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ಸರಕಾರಿ ಸಹಾಯಕ ಅಭಿಯೋಜಕ ರವರಿಂದ.**

ಚಾ.ಸಾ. 1,4,6,7 ರವರ ಪರಿಚಯ ಇದೆ. ದಿ. 18-8-2022 ರಂದು ರಾತ್ರಿ ಗಂಟೆ ಸುಮಾರಿಗೆ ನಾಗಾವಿ ಬಿ.ಕೆ. ತಾಂಡಾ ದ ಹತ್ತಿರ ಅಪಘಾತವಾಗಿತ್ತು. ಎರಡು ಬೈಕ್ ಗಳ ನಡುವೆ ಅಪಘಾತವಾಗಿತ್ತು. ಆಗ ನಾನು ನನ್ನ ಕಾರಿನಲ್ಲಿ ವಿಜಯಪುರಕ್ಕೆ ಹೊರಟಿದ್ದೆ. ಅಪಘಾತವಾಗಿ ಬಿದ್ದಿದ್ದವರನ್ನು ನೋಡಿ ಗುರುತಿಸಿ, ನಂತರ ಅವರನ್ನು ಜೀಪ್ ನಲ್ಲಿ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಅಲ್ಲಿ 4 ಜನ ಬಿದ್ದಿದ್ದರು. ಎರಡು ಬೈಕ ಗಳು ಇದ್ದವು. ಎರಡು ಬೈಕ್ ಗಳು ಮುಖಾ ಮುಖಿಯಾಗಿ ಅಪಘಾತಕ್ಕೆ ಒಳಗಾಗಿದ್ದವು. ಶ್ರೀಶೈಲ್ ಎನ್ನುವವರಿಗೆ ಕಾಲು ಮುರಿದಿತ್ತು. ಆರೋಪಿಗೆ ಕಾಲು ಮುರಿದಿತ್ತು. ಚಾ>ಸಾ.4 ರವರಿಗೆ ಗಾಯಗಳು ಆಗಿದ್ದವು. ಇನ್ನೊಬ್ಬನಿಗೆ ಏನು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಆರೋಪಿಯ ತಪ್ಪಿನಿಂದ ಅಪಘಾತವಾಗಿತ್ತು. ಈ ವಿಷಯವನ್ನು ಪೊಲೀಸರ ಮುಂದೆ ಹೇಳಿದ್ದೇನೆ.

**ಮದ್ಯಾಹ್ನ 12-35 ಗಂಟೆಯ ವರೆಗೂ ಕಾಯಲಾಗಿದ್ದು, ಆರೋಪಿಪರ ವಕೀಲರು ಗೈರು ಹಾಜರಾಗಿರುತ್ತಾರೆ. ಆದ್ದರಿಂದ ರೂ. 500/- ದಂಡವನ್ನು ವಿಧಿಸಿ ಪಾಟೀ ಸವಾಲನ್ನು ಮುಂದೂಡಲಾಯಿತು.**

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.

ಸಿಂದಗಿ